ಕರ್ನಾಟಕ ವಿಧಾನ ಸಭೆ

ಶುಕ್ರವಾರ 27ನೇ ಮಾರ್ಚಿ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ. ಬೆಳಿಗ್ಗೆ 10.25 ಕ್ಕೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ.ಸಿ.ಕೇಶವಮೂರ್ತಿ ಅವರು ಪೀಠವನ್ನು ಅಲಂಕರಿಸಿದ್ದರು]

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಉಪಾಧ್ಯಕ್ಷಿಣಿಯವರು:- ಶ್ರೀ ಬಾಬುರಾವ್ ಚೌಹಾನ್‌ರವರೆ ನಿಮ್ಮ ಪ್ರಶ್ನೆಗೆ ಮಂತ್ರಿಗಳು 15 ದಿನ ಟೈಮ್ ಕೇಳಿದ್ದಾರೆ. ಆದ್ದರಿಂದ ಅದನ್ನು ಮುಂದೆ ತೆಗೆದುಕೊಳ್ಳೋಣ.

ಶ್ರೀ ಬಾಬುರಾವ್ ಚೌಹಾನ್:- ಇದು ಬಹಳ ಮುಖ್ಯವಾದ ಪ್ರಶ್ನೆ ಇತ್ತು. ಇದು ಹುಡುಗರ ಅಡ್ಮಿಷನ್ ಗೋಸ್ಕರ ಈ ಪ್ರಶ್ನೆ ಇತ್ತು.

ಉಪಾಧ್ಯಕ್ಷಿಣಿಯವರು:- ಅವರು 15 ದಿವಸ ಟೈಮ್ ಕೇಳಿದ್ದಾರೆ. ಉತ್ತರವೇ ಇಟ್ಟಿಲ್ಲ, ತಾವು ಪ್ರಶ್ನೆ ಹೇಗೆ ಕೇಳುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಬಾಬುರಾವ್ ಚೌಹಾನ್:- ಇನ್ನು 15 ದಿವಸ ಆದಮೇಲೆ ಅಸೆಂಬ್ಲಿ ಇರುವುದಿಲ್ಲ. ಉತ್ತರವನ್ನು ಕಳುಹಿಸಿಕೊಡುತ್ತಾರೋ ಏನೋ?

ಉಪಾಧ್ಯಕ್ಷಿಣಿಯವರು:- ಉತ್ತರ ಕಳುಹಿಸಿಕೊಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಶಿವಣ್ಣ:- ಕಳುಹಿಸಿಕೊಡುತ್ತೇನೆ.

ಶ್ರೀ ಬಾಬುರಾವ್ ಚೌಹಾನ್:- ಎಷ್ಟು ದಿವಸದಲ್ಲಿ ಕಳುಹಿಸಿಕೊಡುತ್ತಾರೆ?

ಉಪಾಧ್ಯಕ್ಷಿಣಿಯವರು:- ಉತ್ತರ ಬರುತ್ತಿದ್ದ ಹಾಗೆ ಕಳುಹಿಸಿಕೊಡುತ್ತಾರೆ.

ವಿಷಯ:- ರಾಜ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ದಾದಿಯರ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 463 (2340)

ಶ್ರೀ ಕೆ.ಕುಶಾಲ್ (ಸೂಳ್ಯ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ 1991ಕ್ಕಿಂತ ಮೊದಲು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಟಾಫ್ ನರ್ಸ್‌ಗಳ ಹುದ್ದೆಗೆ ನೇಮಕ ಮಾಡಿಕೊಳ್ಳಲು ಇದ್ದ ನೇಮಕಾತಿಯ ವಿಧಾನವೇನು?

ಆ 1991ರ ನಂತರ ನೇಮಕಾತಿ ವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಲಾಗಿದೆಯೇ?

ಇ ಈ ಬದಲಾವಣೆಯು ರಾಜ್ಯದ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನಾನುಕೂಲವುಂಟು ಮಾಡುವುದೇ?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಶೇ.25 ರಷ್ಟು ನರ್ಸಿಂಗ್ ಪದವೀಧರರಿಂದ ಶೇ.75 ರಷ್ಟು ಎಸ್.ಎಸ್.ಎಲ್.ಸಿ.ಯೊಂದಿಗೆ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫ್‌ರಿ ಪ್ರಮಾಣ ಪತ್ರ ಹೊಂದಿದವರಿಂದ.

ಆ ಇಲ್ಲ.

ಇ ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಕೇಳಿದ 'ಅ' ಪ್ರಶ್ನೆಗೆ ಮಾನ್ಯ ಮಂತ್ರಿಗಳು ಶೇಕಡ 25ರಷ್ಟು ನರ್ಸಿಂಗ್ ಪದವೀಧರರಿಂದ ಶೇಕಡ 75ರಷ್ಟು ಎಸ್.ಎಸ್.ಎಲ್.ಸಿ ಯೊಂದಿಗೆ ನರ್ಸಿಂಗ್ ಮತ್ತು ಮಿಡ್‌ವೈಫರಿ ಪ್ರಮಾಣ ಪತ್ರ ಹೊಂದಿದವರನ್ನು ಭರ್ತಿ ಮಾಡಲಾಗುತ್ತದೆಂದು ಹೇಳುತ್ತಿದ್ದಾರೆ. ನಂತರ

'ಅ' ಪ್ರಶ್ನೆಗೆ ಮತ್ತು 'ಇ' ಪ್ರಶ್ನೆಗೆ ಇಲ್ಲ, ಉದ್ಭವಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. 1991ನೇ ಇಸವಿಯಿಂದ ಸ್ಟಾಫ್ ನರ್ಸ್ ಹುದ್ದೆಗಳನ್ನು ಸರ್ಕಾರ ನಡೆಸಲ್ಪಡುತ್ತಿರುವ ನರ್ಸಿಂಗ್ ತರಬೇತಿ ಶಾಲೆಗಳಲ್ಲಿ ಮೂರೂವರೆ ವರ್ಷಗಳ ಕಾಲ ತರಬೇತಿ ಪಡೆದ ವಿದ್ಯಾರ್ಥಿಗಳನ್ನು ಜ್ಯೇಷ್ಠತಾ ಆಧಾರದ ಮೇಲೆ ಬ್ಯಾಚ್ ಬೈ ಬ್ಯಾಚ್ ತುಂಬಲಾಗುತ್ತಿತ್ತು. ಸದರಿ ಅಭ್ಯರ್ಥಿಗಳನ್ನು ನರ್ಸಿಂಗ್ ತರಬೇತಿಗೆ ಆಯ್ಕೆ ಮಾಡುವಾಗ ರಾಜ್ಯದಲ್ಲಿರುವ ರಿಸರ್ವೇಷನ್ ಪಾಲಿಸಿಯನ್ನು ಗಮನಕ್ಕೆ ತೆಗೆದುಕೊಂಡು ಭರ್ತಿ ಮಾಡಲಾಗುತ್ತಿತ್ತು. ವಿದ್ಯಾರ್ಥಿಗಳು ಕನಿಷ್ಠ 5 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರಲೇಬೇಕು ಎಂದು ಅವರಿಂದ ಒಂದು ಬಾಂಡನ್ನು ಬರೆಸಿಕೊಳ್ಳಲಾಗುತ್ತಿತ್ತು. ಆದರೆ ಇತ್ತೀಚೆಗೆ ಸರ್ಕಾರ, ಸ್ಟಾಫ್ ನರ್ಸ್ ಆಯ್ಕೆಯಲ್ಲಿ ಬದಲಾವಣೆ ಮಾಡಿದ್ದು, ಸ್ಟಾಫ್ ನರ್ಸ್ ಆಯ್ಕೆಯನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡುತ್ತಿದೆ. ಇದರಿಂದ ಸರ್ಕಾರಿ ನರ್ಸಿಂಗ್ ಶಾಲೆಗಳಲ್ಲಿ ತರಬೇತಿ ಹೊಂದಿದಂಥ ಗ್ರಾಮಾಂತರ ಪ್ರದೇಶಗಳ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಅಲ್ಲದೆ ನರ್ಸಿಂಗ್ ಶಾಲಾ ಕಾಲೇಜುಗಳಲ್ಲಿ ತರಬೇತಿ ಹೊಂದಿದಂಥ ಅಭ್ಯರ್ಥಿಗಳಿಗೆ ಅನುಕೂಲ ಕೂಡ ಆಗುತ್ತಿಲ್ಲ. ಈ ದೃಷ್ಟಿಯಿಂದ ಹೊಸ ರಾಜ್ಯದಿಂದ ಡೊನೇಷನ್ ಪಡೆದು ಪ್ರೈವೇಟ್ ನರ್ಸಿಂಗ್ ಟ್ರೈನಿಂಗ್ ಆದಂಥ ಅಭ್ಯರ್ಥಿಗಳನ್ನು ಈಗ ಆಯ್ಕೆ ಮಾಡುವಂಥ ಪದ್ಧತಿ ಒದಗಿದೆ. ಇದರಿಂದ ರೋಸ್ಟರ್ ಸಿಸ್ಟಮ್‌ನಲ್ಲೂ ಅನ್ಯಾಯವಾಗುತ್ತಿದೆ. ಬಹುಶ: ಇದರಲ್ಲಿ 'ಇ' ಪ್ರಶ್ನೆಗೆ ಉತ್ತರವಾಗಿ ಉದ್ಭವಿಸುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

ಉಪಾಧ್ಯಕ್ಷಿಣಿಯವರು:- ಕೂಶಾಲ್‌ರವರೆ ಶಾರ್ಟ್ ಆಗಿ/ಕೇಳಿ. ಆಮೇಲೆ ತಿರುಗಿ ಕೇಳುವಿರಂತೆ.

ಶ್ರೀ ಕೆ.ಕುಶಾಲ:- ಈಗ ಲೋಕಸೇವಾ ಆಯೋಗದಿಂದ ಸ್ಟಾಫ್ ನರ್ಸ್ ಆಯ್ಕೆಯನ್ನು ನಿಲ್ಲಿಸಿ ಸರ್ಕಾರಿ ಶಾಲೆಗಳಿಂದ ತರಬೇತಿ ಹೊಂದಿದಂಥ ಸ್ಟಾಫ್ ನರ್ಸ್ ಅಭ್ಯರ್ಥಿಗಳಿಗೆ ಏನಾದರೂ ಬ್ಯಾಚ್ ಬೈ ಬ್ಯಾಚ್ ಜ್ಯೇಷ್ಠತಾ ಆಧಾರದ ಮೇಲೆ ಉದ್ಯೋಗವನ್ನು ಕೊಡುವಂಥ ಕ್ರಮವನ್ನು ಕೈಗೊಳ್ಳುತ್ತೀರಾ ಎನ್ನುವ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಸನ್ಮಾನ್ಯ ಅಧ್ಯಕ್ಷರೇ, ಈ ಸ್ಟಾಫ್ ನರ್ಸ್ ಹುದ್ದೆಗಳಿಗೆ ಇದ್ದಂಥ ಒಂದು ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಮೊದಲು ಇದ್ದ ಹಾಗೆ ನಾವು ಮುಂದುವರಿಸಿದ್ದೇವೆ. ಆಯ್ಕೆ ಮತ್ತು ನೇಮಕಾತಿಗಳ ಬಗ್ಗೆಯಾವುದೇ ನಿಯಮಗಳನ್ನು ನಾವು ಬದಲಾವಣೆ ಮಾಡಿಲ್ಲ. ಮೊದಲು ಇದ್ದಂಥ ನಿಯಮಗಳ ಪ್ರಕಾರವೇ ಶೇಕಡ 25 ರಷ್ಟನ್ನು ನರ್ಸಿಂಗ್ ಪದವೀಧರರಿಂದ ಮತ್ತು ಶೇಕಡಾ 75 ರಷ್ಟು ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ ಪ್ರಮಾಣದಿಂದ ನೇಮಕಾತಿ ಮಾಡಿಕೊಳ್ಳತಕ್ಕಂಥ ಅವಕಾಶ ಇತ್ತು. ಮೊದಲು ನಮ್ಮ ಇಲಾಖೆಯ ಡೈರೆಕ್ಟರ್‌ರವರೇ ಇಂಥ ನೇಮಕಾತಿಗಳನ್ನು ಮಾಡುವ ಅವಕಾಶ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಸಂಬಳ ಮತ್ತು ಭತ್ಯೆ ಹೆಚ್ಚಾದ ಪರಿಣಾಮವಾಗಿ , ಇವರು ಲೋಕಸೇವಾ ಆಯೋಗದ ಮೂಲಕವೇ ನೇಮಕಾತಿ ಆಗತಕ್ಕಂಥ ಒಂದು ಮಿತಿಗೆ ಬರುವವರಾಗಿದ್ದಾರೆ. ಆದ್ದರಿಂದ ನಾವು ಇದನ್ನು ಲೋಕಸೇವಾ ಆಯೋಗದವರಿಗೆ ವಹಿಸಿಕೊಟ್ಟಿದ್ದೇವೆ. ಅವರು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ನಿಯಮಗಳನ್ನು ಅನುಸರಿಸಿಯೇ ಮಾಡುತ್ತಾರೆ. ಅವರು ರೋಸ್ಟರ್, ಮೀಸಲಾತಿ ಮುಂತಾದ ಎಲ್ಲಾ ಅನುಸರಿಸುತ್ತಾರೆ. ಹೀಗೆ ಲೋಕ ಸೇವಾ ಆಯೋಗಕ್ಕೆ ನಾವು ವಹಿಸಿದ ನಂತರ ನರ್ಸಿಂಗ್ ಅಸೋಸಿಯೇಷನ್‌ನವರು ಕೆಎಟಿಗೆ ಹೋಗಿದ್ದಾರೆ. ಅಲ್ಲಿ ಜಡ್ಜ್‌ಮೆಂಟ್ ಕೂಡ ಆಗಿದೆ. ಸರಕಾರ ತೆಗೆದುಕೊಂಡಂಥ ನಿಲುವು ಸರಿಯಾಗಿದೆ, ಆದ್ದರಿಂದ ಅಸೋಸಿಯೇಶನ್ ಕೇಳತಕ್ಕಂಥ ಅರ್ಜಿಯಲ್ಲಿ ಹುರುಳಿಲ್ಲ ಎಂದು ತಿರಸ್ಕಾರ ಕೂಡ ಮಾಡಿದ್ದಾರೆ. ಆದ್ದರಿಂದ ಯಾವುದೇ ಬದಲಾವಣೆ ಇಲ್ಲದೇನೇ ಹಿಂದೆ ಇದ್ದಂಥ ಯಥಾಸ್ಥಿತಿಯಲ್ಲಿ ಮುಂದುವರಿಸಿ ಅವರನ್ನು ನೇಮಕಾತಿ ಮಾಡಿಕೊಳ್ಳುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ.

ಶ್ರೀ ಕೆ.ಕುಶಾಲ:- ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ಎರಡು ಸಾವಿರ ಸ್ಟಾಫ್ ನರ್ಸ್ ತರಬೇತಿ ಹೊಂದಿದವರು ಇದ್ದಾರೆ. ಸರಕಾರದ ಸಂಸ್ಥೆಯಿಂದ ಅವರಿಗೆ ಸ್ಟೈಫಂಡ್ ಕೊಟ್ಟು ಈಗ ಉದ್ಯೋಗ ನೀಡುವಾಗ

ಲೋಕಸೇವಾ ಆಯೋಗದಿಂದ ಭರ್ತಿ ಮಾಡುವಾಗ ಗ್ರಾಮೀಣ ಜನರಿಗೆ ಅನ್ಯಾಯವಾಗುತ್ತದೆ. ಬಹುಶ: ಹೊರ ರಾಜ್ಯಗಳ ತರಬೇತಿ ಪಡೆದ ಜನರು ಬಂದು ಡೊನೇಷನ್ ಕೊಟ್ಟು ಖಾಸಗಿ ಸಂಸ್ಥೆಗಳಿಂದ ತರಬೇತು ಪಡೆದವರು ಇದರಲ್ಲಿ ಹುದ್ದೆಗಳನ್ನು ಪಡೆದರೆ ನಮ್ಮ ಗ್ರಾಮೀಣ ಜನರಿಗೆ ಇದರಿಂದ ಖಂಡಿತ ಅನ್ಯಾಯವಾಗುವುದರಿಂದ ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಇದರಿಂದ ಖಂಡಿತವಾಗಿ ಗ್ರಾಮೀಣ ಪ್ರದೇಶದ ಜನರಿಗೆ ತೊಂದರೆಯಾಗುವುದಿಲ್ಲ. ಈಗಾಗಲೇ ಲೋಕಸೇವಾ ಆಯೋಗದವರು ಜನರಲ್ ನಿಯಮಗಳ ಮೂಲಕ ಕರ್ನಾಟಕದವರಿಗೆ ಹೆಚ್ಚಿನ ಹುದ್ದೆಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಮತ್ತು ನೇಮಕಾತಿಯಲ್ಲಿ ರೋಸ್ಟರ್ ಮತ್ತು ಮೀಸಲಾತಿ ನಿಯಮಗಳನ್ನು ನಾವು ಪಾಲನೆ ಮಾಡುವುದರಿಂದ ಗ್ರಾಮೀಣ ಪ್ರದೇಶದವರಿಗಾಗಲಿ, ಕರ್ನಾಟಕದವರಿಗಾಗಲೀ, ಯಾವುದೇ ಅನ್ಯಾಯವಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಮೊನ್ನೆ ತಾನೆ ಸರಕಾರದವರು ತೆಗೆದುಕೊಂಡ ನೀತಿಯ ಪ್ರಕಾರ ಗ್ರಾಮೀಣ ಪ್ರದೇಶದ ಎಲ್ಲ ಅಭ್ಯರ್ಥಿಗಳಿಗೆ 15 ಕೃಪಾಂಕಗಳನ್ನು ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ಕೂಡ ಇದಕ್ಕೆ ಅನ್ವಯವಾಗುವುದರಿಂದ ಗ್ರಾಮೀಣ ಪ್ರದೇಶದ ಜನತೆಗೆ ಯಾವ ತೊಂದರೆಯೂ ಆಗುವುದಿಲ್ಲ.

ಶ್ರೀ ಕೆ.ಕುಶಾಲ :- ಇವರನ್ನು ಆಯ್ಕೆ ಮಾಡುವಾಗಲೆ ರಿಸರ್ವೇಶನ್ ಪಾಲಿಸಿಯನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಆದುದರಿಂದ ಲೋಕಸೇವಾ ಆಯೋಗದಿಂದ ಪುನ: ಆಯ್ಕೆ ಮಾಡುವಂಥ ಪ್ರಶ್ನೆ ಬರುವುದಿಲ್ಲ.

ಶ್ರೀ ಬಿ.ಶಿವರಾಂ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ 15 ಕೃಪಾಂಕ ಕೊಡುವುದು ಏನಿದೆ ಅದು ಬಹುಶ: ಲೋಕಸೇವಾ ಆಯೋಗದಲ್ಲಿ ಆಗುವುದಿಲ್ಲ ಎಂದು ಕಾಣುತ್ತದೆ. ಅದು ಸಿ ಮತ್ತು ಡಿ ಗ್ರೂಪ್‌ಗೆ ಮಾತ್ರ ಅನ್ವಯವಾಗತಕ್ಕಂಥಾದ್ದು ಎಂದು ಕಾಣುತ್ತದೆ. ಪತ್ರಿಕೆಗಳಲ್ಲಿ ಇದು ಲೋಕಸೇವಾ ಆಯೋಗದ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಮಂತ್ರಿಗಳ ಅಭಿಪ್ರಾಯವನ್ನು ಕೇಳುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ನಾವಿನ್ನೂ ಲೋಕಸೇವಾ ಆಯೋಗದ ಜೊತೆಯಲ್ಲಿ ನಿರ್ಣಯ ಮಾಡಿಲ್ಲ. ಸಿ ಅಂಡ್ ಡಿ ಗಳಿಗೆ ಮಾತ್ರ ನಾವು ತೀರ್ಮಾನ ತೆಗೆದುಕೊಂಡು ಸಂಬಂಧಪಟ್ಟಂಥ ನೇಮಕಾತಿ ಸಮಿತಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಲೋಕಸೇವಾ ಆಯೋಗದವರ ಜೊತೆಯಲ್ಲಿ ವ್ಯವಹರಿಸುತ್ತಿದ್ದೇವೆ. ಅದು ಅಂತಿಮ ತೀರ್ಮಾನದ ಹಂತದಲ್ಲಿದೆ.

ಶ್ರೀ ಬಿ.ಶಿವರಾಂ:- ಹೀಗೆ ಲೋಕಸೇವಾ ಆಯೋಗದವರಿಗೆ ಕೊಡುವುದರಿಂದ ಗ್ರಾಮಾಂತರ ಪ್ರದೇಶದವರಿಗೆ ತೊಂದರೆಯಾಗುತ್ತದೆ. ಆದರ ಬದಲು ಮೊದಲು ಹೇಗೆ ರೆಕ್ರೂಟ್‌ಮೆಂಟ್ ಆಗುತ್ತಿತ್ತು ಅದೇ ರೀತಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ. ಆದರಿಂದ ಗ್ರಾಮೀಣ ಜನತೆಗೆ ನ್ಯಾಯ ದೊರೆತು ಅನುಕೂಲವಾದೀತು.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ. ಈ ವರ್ಗದ ನೇಮಕಾತಿಗಳನ್ನು ಸರಕಾರದವರು ಮಾಡುವುದಕ್ಕಾಗುವುದಿಲ್ಲ, ಕಾರಣವೇನೆಂದರೆ 1600ಕ್ಕಿಂತ ಹೆಚ್ಚಿಗೆ ಸಂಬಳ ಪಡೆಯುವವರಾದುದರಿಂದ, ಇವರು ಲೋಕ ಸೇವಾ ಆಯೋಗದವರ ಆಯ್ಕೆಯ ವ್ಯಾಪ್ತಿಯಲ್ಲಿ ಬರುವವರಾದುದರಿಂದ ಇದನ್ನು ಸರಕಾರ ಮಾಡುವುದಕ್ಕಾಗುವುದಿಲ್ಲ, ಅವರಿಂದಲೇ ಮಾಡಿಸಬೇಕಾಗುತ್ತದೆ. ಅವರು ಹೀಗೆ ನೇಮಕ ಮಾಡುವ ಸಮಯದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದರಿಂದ ಯಾವುದೇ ವಿಧವಾದಂಥ ಅನ್ಯಾಯವು ಯಾರಿಗೂ ಆಗುವುದಿಲ್ಲ.

ಡಾ||ಎ.ಬಿ.ಮಲಕರೆಡ್ಡಿ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು 'ಅ'ಪ್ರಶ್ನೆಗೆ ಉತ್ತರವಾಗಿ ಶೇಕಡ 25 ರಷ್ಟು ನರ್ಸಿಂಗ್ ಪದವೀಧರರಿಂದ ಶೇಕಡ 75 ರಷ್ಟು ಎಸ್.ಎಸ್.ಎಲ್.ಸಿ ಯೊಂದಿಗೆ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ ಪ್ರಮಾಣ ಪತ್ರ ಹೊಂದಿದವರಿಂದ ಎಂದು ಹೇಳಿದ್ದಾರೆ. ಈಗಾಗಲೇ ನಮ್ಮಲ್ಲಿ ನರ್ಸಿಂಗ್ ಸಿಬ್ಬಂದಿ ಕೊರತೆ ಇದೆ. ತಾವು ಲೋಕಸೇವಾ ಆಯೋಗ ಇದರಲ್ಲೇ ಡಿಲೇ ಮಾಡುತ್ತಿದ್ದೀರಿ

ಎರಡನೆಯದಾಗಿ 25 ಪರ್ಸೆಂಟ್ ನರ್ಸಿಂಗ್ ಗ್ರಾಜುಯೇಟ್ಸ್‌ಗಳಿಗೆ ಯಾವಾಗ ಡ್ಯೂಟಿ ಕೊಡುತ್ತೀರಿ. ಎಸ್. ಎಸ್. ಎಲ್. ಸಿ ಆದವರಿಗೆ ಯಾವ ಡ್ಯೂಟಿ ಕೊಡುತ್ತೀರಿ. ಏಕೆಂದರೆ 75 ಪರ್ಸೆಂಟ್ ಎಂದು ತಾವು ಲಿಮಿಟ್ ಮಾಡುತ್ತಿದ್ದೀರಿ. ಈ ನರ್ಸ್‌ಗಳಿಗೆ ಕೊಡುವ ಕರ್ತವ್ಯ ಏನು, ಆ ನರ್ಸ್‌ಗಳಿಗೆ ಕೊಡುವ ಕರ್ತವ್ಯ ಏನು? ಈ ತಾರತಮ್ಯ ಏಕೆ ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಡಾ.ಮಲಕರೆಡ್ಡಿಯವರು ಪದವೀಧರರಿಗೆ ಯಾವರೀತಿಯ ಕೆಲಸ ಕೊಡುತ್ತೀರಿ ,ಪದವೀಧರರಲ್ಲದವರಿಗೆ ಟ್ರೈನಿಂಗ್ ಆಗಿರುವವರಿಗೆ ಯಾವ ರೀತಿಯ ಕೆಲಸ ಕೊಡುತ್ತೀರಿ ಎಂದು ಕೇಳಿದ್ದಾರೆ. ಈಗಾಗಲೇ ಜಾಬ್‌ಚಾರ್ಟ್‌ನಲ್ಲಿ ವೃತ್ತಿಯನ್ನು ಹಂಚಿಕೆ ಮಾಡಿದ್ದಾರೆ. ಆ ಆಯ್ಕೆಯ ನಂತರ ಇವರೆಲ್ಲಾ ಒಂದೇ ವರ್ಗದ ಕೆಲಸದ ವ್ಯಾಪ್ತಿಗೆ ಬರುವರು ಎಂದು ತಿಳಿಸಬಯಸುತ್ತೇನೆ. ಈ ಬಗ್ಗೆ ಆಮೇಲೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಮಲಕರೆಡ್ಡಿಯವರಿಗೆ ನಾನು ಒದಗಿಸುತ್ತೇನೆ. ಸನ್ಮಾನ್ಯ ಕುಶಾಲ ಅವರು ಗ್ರಾಮೀಣ ಪ್ರದೇಶದವರಿಗೆ ಏನು ತೊಂದರೆಯಾಗುತ್ತದೆಂದು ಕಳಕಳಿ ವ್ಯಕ್ತಪಡಿಸಿದ್ದಾರೆ, ಆ ಕಳಕಳಿಗೆ ಅವಕಾಶವಿಲ್ಲ, ಅನಾನುಕೂಲವಾಗುವುದಿಲ್ಲ ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ.

ಶ್ರೀ ಸಾದತ್ ಅಲಿಖಾನ್:- ಕರ್ನಾಟಕದಲ್ಲಿ ಯಾವ ಆಸ್ಪತ್ರೆ ನೋಡಲಿ ನರ್ಸ್‌ಸ್ ಇರುವವರೆಲ್ಲ ಕೇರಳದವರೆ. ಅದಕ್ಕೆ ಸರ್ಕಾರಿ ಮತ್ತು ಖಾಸಗಿ ನರ್ಸಿಂಗ್ ಸ್ಕೂಲ್ಸ್ ಏನಿದೆ ಅದರಲ್ಲಿ ಪರ್ಸೆಂಟೇಜ್ ಆಫ್ ಟ್ರೈನೀಸ್ ಕರ್ನಾಟಕದವರಿಗೆ ಏಕೆ ಜಾಸ್ತಿ ಮಾಡುವುದಿಲ್ಲ? ಹಿಂದೆ ನರ್ಸಿಂಗ್ ಸ್ಕೂಲ್ಸ್ ಇರಲಿಲ್ಲ, ಈಗ ಕರ್ನಾಟಕದಲ್ಲಿ ಬೇಕಾದಷ್ಟು ನರ್ಸಿಂಗ್ ಸ್ಕೂಲ್ಸ್ ಆಗಿವೆ. ಅದಕ್ಕೆ ಮುಂದಕ್ಕೆ ಅಡ್ಮಿಶನ್‌ನಲ್ಲಿ ಕರ್ನಾಟಕದವರಿಗೆ ಏಕೆ ಜಾಸ್ತಿ ಮಾಡುವುದಿಲ್ಲ? ಯಾವ ಆಸ್ಪತ್ರೆಯಲ್ಲಿ ನೋಡಲಿ, 90 ಪರ್ಸೆಂಟ್ ಎಲ್ಲ ಕೇರಳ ನರ್ಸ್‌ಸ್ ಇದ್ದಾರೆ. ಆದ್ದರಿಂದ ನರ್ಸಿಂಗಿಗೆ ಅಥವಾ ನರ್ಸ್‌ಸ್ ಅಪಾಯಿಂಟ್‌ಮೆಂಟ್‌ಗೆ ಕರ್ನಾಟಕದವರಿಗೆ ಏಕೆ ಎನಕರೇಜ್ ಮಾಡುವುದಿಲ್ಲ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ನಾನು ಮೊದಲೇ ಹೇಳಿದ್ದೇನೆ, ಕರ್ನಾಟಕದವರಿಗೆ ಮೊದಲ ಆದ್ಯತೆ, ನಂತರ ಬೇರೆಯವರಿಗೆ ಎಂದು ಹೇಳಿದ್ದೇನೆ. ಕರ್ನಾಟಕದವರು ನರ್ಸ್‌ಸ್ ಟ್ರೈನಿಂಗ್‌ಗೆ ಬಂದರೆ ಕೊಡುವುದಕ್ಕೆ ತೊಂದರೆ ಇಲ್ಲ. ಆದರೆ ಬರದೇ ಇದ್ದಾಗ ಆ ಸೀಟ್‌ಗಳನ್ನು ಭರ್ತಿ ಮಾಡಲಿಕ್ಕೆ ಬೇರೆ ಕಡೆಯಿಂದ ಖಾಸಗಿಯವರು ಸೇರಿಸಿಕೊಳ್ಳುತ್ತಾರೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೆ ಇರುವ ನಂಬರನ್ನು ಜಾಸ್ತಿ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಅದರ ಬಗ್ಗೆ ಪರಿಶೀಲಿಸಲಾಗುವುದು.

ವಿಷಯ:- ರಾಜ್ಯದಲ್ಲಿರುವ ಅಂಗನವಾಡಿ ಮತ್ತು ಬಾಲವಾಡಿ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 466 (1017)

ಶ್ರೀ ಎಂ.ಶ್ರೀನಿವಾಸಯ್ಯ :- (ಟಿ.ನರಸೀಪುರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ ರಾಜ್ಯದಲ್ಲಿರುವ ಅಂಗನವಾಡಿ ಮತ್ತು ಬಾಲವಾಡಿ ಸಂಖ್ಯೆ ಎಷ್ಟು:

ಆ ಇವುಗಳಲ್ಲಿ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ

ಇ ಸ್ವಂತ ಕಟ್ಟಡ ಕಟ್ಟಿಸಲು ಸರ್ಕಾರವೇನಾದರೂ ಕಾರ್ಯಕ್ರಮಗಳನ್ನು ರೂಪಿಸಿದೆಯೇ?

ಈ ಈ ಕೇಂದ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಪರಿಶಿಷ್ಟ ಅಧಿಕಾರಿಗಳ ಸಂಖ್ಯೆ ಎಷ್ಟು ?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ಅಂಗನವಾಡಿ : 22113

ಬಾಲವಾಡಿಗಳನ್ನು ಈ ಇಲಾಖೆ ನಡೆಸುತ್ತಿಲ್ಲ.

ಅಂಗನವಾಡಿಗಳ ಜಿಲ್ಲಾವಾರು ಮಾಹಿತಿಯನ್ನು ಈ ಕೆಳಗೆ ಕೊಡಲಾಗಿದೆ: